# ಕಂಪು ಕಂನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ

ಯುಗಾದಿ ಸಂಚಿಕೆ

ಸಂಪುಟ 2 ಸಂಚಿಕೆ 3

Newsletter of MKANT
Yugaadi 2012

www.mallige.org


## ಈ ಸಂಚಿಕೆಯಲ್ಲಿ


| | |
|---|---|
| ಇದು ಪುರಾಣ | 1 |
| ಕವನ | 3 |
| ಅಧ್ಯಕ್ಷರ ಸಂದೇಶ | 4 |
| ಮಲ್ಲಿಗೆ ಮೊಗ್ಗುಗಳು | 6 |
| ಪಾಕಂಪಪ್ಪು | 7 |
| ಕರಕುಶಲೆ | 8 |
| ಸಂಪಾದಕೀಯ | 9 |
| Kanglish! | 10 |


# *"ಇದು" ಪುರಾಣ*


– ಸುಧಾ ಶ್ರೀನಾಥ್




**ಇದೆಷ್ಟು 'ಇದು' (special) ಗೊತ್ತಾ?!**

"ಅಮ್ಮಾ, 'ಇದು' ಅಂದ್ರೆ ಏನು?" ನನ್ನ ಐದು ವರ್ಷದ ಪುಟ್ಟ ಮಗಳ ಪ್ರಶ್ನೆ ಕೇಳಿ ಆಶ್ಚರ್ಯವಾಯ್ತು. "ಯಾಕೆ ಅನುಮಾನ ಕಂದಾ, 'ಇದು' ಅಂದ್ರೆ 'this' ಅಂತಾ ನಿನಗೆ ಗೊತ್ತಿದೆಯಲ್ವಾ?" ಅಮೆರಿಕದ ಡಾಲಸ್ ನಗರದಲ್ಲಿ 'ಅರಳುಮಲ್ಲಿಗೆ' ಕನ್ನಡಶಾಲೆಯಲ್ಲಿ ಕನ್ನಡ ಕಲೀತಿದ್ದ ನನ್ನ ಮಗಳ ಪ್ರಶ್ನೆಗಳಿಗೆ ಉತ್ತರಿಸುವುದು ಒಮ್ಮೊಮ್ಮೆ ತುಂಬಾನೇ ಕಷ್ಟದ ಕೆಲಸ ಎನಿಸಿದ್ದುಂಟು. "ಅದು ಗೊತ್ತಿದೆ ಅಮ್ಮಾ! 'this' is a pronoun. I think you people use it as an adverb/adjective. It is a little confusing. ಬೆಳಿಗ್ಗೆ ಲತಾ ಆಂಟೀ 'ಅವರೆಷ್ಟು ಇದು ಮಾಡ್ತಾರೆ ಗೊತ್ತಾರೀ?' ಅಂತ ನಿನಗೆ ಹೇಳಿದ್ದು ಕೇಳಿದೆ. ಹಾಗಂದ್ರೆ ಏನು ಅಮ್ಮ?"

"It depends on the context. Also, depending on the tone used, it could convey the intended meaning" ಅಂದೆ. ಅವಳಿಗೆ ಅರ್ಥ ಆದ ಹಾಗೆ ಕಾಣಲಿಲ್ಲ. ಉದಾಹರಣೆಗಾಗಿ ಕೆಲವನ್ನು ಸಂದರ್ಭ ಸಹಿತ ವಿವರಿಸಬೇಕಾಯ್ತು.

"ಯುಗಾದಿ ಬಂದ್ರೆ ನಾವುಗಳು ಮಕ್ಕಳಾಗಿದ್ದಾಗ ಬೇವುಬೆಲ್ಲ ತಿನ್ನೋದಿಕ್ಕೆ ಎಷ್ಟು ಇದು ಮಾಡ್ತಾ ಇದ್ವಿ ಅನ್ನೋದು ನೆನಪಾಗುತ್ತೆ" ಅಂತ ಗೀತ ಆಂಟೀ ಹೇಳ್ತಿದ್ರು. ಇಲ್ಲಿ 'ಇದು' means fuss ಅಲ್ವಾ ಅಮ್ಮ?" ಪುಟ್ಟಿ ಅರ್ಥವಾಗದಿದ್ದು ನೆನಪಿಟ್ಟುಕೊಂಡು ಕೇಳುತ್ತಿದ್ದಾಳೆಂದು ತಿಳಿದು ಖುಷಿಯಾಯ್ತು.

'ಬೇವಿನ ಚಿಕ್ಕ ಚಿಕ್ಕ ಹೂವೂ ಎಷ್ಟು ಇದಿರುತ್ತೆ' ಅಂದ್ರೆ 'ಕಹಿಯಿರುತ್ತೆ' ಅಂತ ಅರ್ಥ ಅಲ್ವಾ?" ಅವಳಿಗೆ ಅರ್ಥವಾಗಿದೆಯೆಂದು ಗೊತ್ತಾಯ್ತು.

"ಹೌದು ಪುಟ್ಟೀ! ಸಂದರ್ಭಾನುಸಾರ 'ಇದು' ಬೇವಿನ ಕಹಿ ಆಗಬಹುದು ಅಥವಾ ಬೆಲ್ಲದ ಸಿಹಿಯೂ ಆಗಬಹುದು."
"ಹಾಗೇ ಹುಳಿಯೂ ಆಗಬಹುದು, ಒಗರೂ ಆಗಬಹುದಲ್ವಾ" ತುಂಟತನದ ಉತ್ತರಕೇಳಿ ನಗು ಬಂತು.

"ಹೌದು. ಇದು ಬಳಕೆಯಿಂದ ಬಹುರೂಪತೆ ಪಡೆದಿರುವ ಪದ. It is a wonderful multifaceted word and fits in very well in many different places and comes very handy ಅಲ್ವಾ?" ಹೌದೆಂದು ನಗುತ್ತಾ ತಲೆದೂಗಿದಳು.

ನೀವುಗಳು ನಿಮ್ಮ ದಿನನಿತ್ಯದ ಸಂಭಾಷಣೆಗಳಲ್ಲಿ 'ಇದು' ಪದ ತುಂಬಾ ಕೇಳಿರಬಹುದು. 'ಅವರೆಷ್ಟು ಇದು ಮಾಡ್ತಾರೆ ಗೊತ್ತಾ? ತುಂಬಾ ಖುಷಿಯಾಗುತ್ತೆ. She makes my day.' ಅಂದಾಗ 'ಇದು' ಅಂದ್ರೆ ಪ್ರೀತಿ ಅಥವಾ ಅಭಿಮಾನದ ಭಾವನೆ ಎಂದಾಗುತ್ತೆ.

ಎಲ್ಲರಿಗೂ ಯುಗಾದಿಯ ಶುಭಾಶಯಗಳು

"ಅವರೆಷ್ಟು ಇದು ಮಾಡ್ತಾರೆ ಗೊತ್ತಾ? ಅವ್ರ ಕಂಡ್ರೆ ದೂರ ಹೋಗೋಣ ಅನ್ನಿಸುತ್ತೆ" ಅಂದಾಗ 'ಇದು' ಅಂದ್ರೆ ತೊಂದರೆ, ಕಿರಿಕಿರಿ ಅಥವಾ ಮನಸ್ಸಿಗೆ ನೋವು ಎಂದಾಗುತ್ತೆ.

"ನನಗೆ ಕೆಲವುಸಲ ಕನ್ನಡದ ಹಾಡು ಕೇಳಿದ್ರೆ ಎಷ್ಟು ಇದಾಗುತ್ತೆ ಅಂದ್ರೆ ಕಣ್ಣಲ್ಲಿ ನೀರು ಬಂದ್ಬಿಡುತ್ತೆ". ಈ ಸಂದರ್ಭದಲ್ಲಿ 'ಇದು' ಅಂದ್ರೆ 'ಭಾವುಕತೆ'. ನಮ್ಮ ತಾಯ್ನಾಡಿನಿಂದ ದೂರ ನೆಲಸಿದಾಗ ನಮ್ಮ ಭಾಷೆ ಕೇಳಿದರೆ ಆಗುವ ಭಾವುಕ ರೋಮಾಂಚನ ಸ್ವಾನುಭವವೇದ್ಯ.

"ನಂಗೆ ಮಸಾಲದೋಸೆ ಅಂದ್ರೆ ಎಷ್ಟು 'ಇದು' ಅಂದ್ರೆ, ಅದಿದ್ದರೆ ಬೇರೇ ಏನೂ ಮುಟ್ಟೋದಿಲ್ಲ." ಎನ್ನುವಾಗ 'ಇದು' ಅಂದ್ರೆ 'ಇಷ್ಟ' ಅಂತ ಅರ್ಥೈಸಿಕೊಳ್ಳಬೇಕು.

"ಬೂದುಗುಂಬಳಕಾಯಿ ಮಜ್ಜಿಗೆಹುಳಿ ಜೊತೆ ಬಾಳಕದ ಮೆಣಸಿನಕಾಯಿ ಇದ್ದರೆ ಅದರ 'ಇದೇ' ಬೇರೆ" ಅಂದಾಗ 'ಇದು' ಅಂದ್ರೆ 'ರುಚಿ' ಅಥವಾ 'ಆಸ್ವಾದನೆಯ ಮಜಾ' ಎಂದು ಅರ್ಥೈಸಿಕೊಳ್ಳಬೇಕು.

"ನಂಗೆ ಇವರು ಕನ್ನಡ ಮಾತಾಡೋದು ಕೇಳಿದ್ರೆ ಎಷ್ಟು ಇದಾಗುತ್ತೇ ಅಂದ್ರೆ ಮೈ ಪರಚಿಕೊಳ್ಳೋಣ ಎನಿಸುತ್ತೆ." ಈ ವಾಕ್ಯದಲ್ಲಿ 'ಇದು' ಅಂದ್ರೆ irritate ಅಂತಾ ಆಗುತ್ತೆ.

"ಅಮೆರಿಕದಲ್ಲಿ ನೆಲೆಸಿದ್ದರೂ ಅವರ ಮನೆಯಲ್ಲಿ ಯಾವಾಗಲೂ ಕನ್ನಡದಲ್ಲೇ ಮಾತಾಡ್ತಾರೆ. ಕನ್ನಡನಾಡಿನಲ್ಲಿ ಆಚರಿಸುವ ಹಬ್ಬ, ವ್ರತಗಳ ಬಗ್ಗೆ ಎಷ್ಟು ಇದು (ಆಸಕ್ತಿ) ಗೊತ್ತಾ? ಎಲ್ಲವನ್ನೂ ತುಂಬಾ ಇದರಿಂದ (ಸಂಭ್ರಮದಿಂದ) ಆಚರಿಸುತ್ತಾರೆ. ದೇವರ ಅಲಂಕಾರವೂ ತುಂಬಾನೇ ಇದರಿಂದ (ವೈಭವದಿಂದ) ಕೂಡಿರುತ್ತೆ. ಎಲ್ಲಾ ಕನ್ನಡಿಗರನ್ನೂ ಆಹ್ವಾನಿಸೋದಷ್ಟೇ ಅಲ್ಲ, ತುಂಬಾ ಇದಾಗಿ (ಗೌರವಾದರಗಳಿಂದ) ನೋಡಿಕೊಳ್ತಾರೆ." ಒಂದೇ ಸಂದರ್ಭದಲ್ಲಿ ಇಷ್ಟು ಸಲ 'ಇದು' ಬಳಸುವುದು ಸ್ವಲ್ಪ ವಿರಳ. ನಾನಿಲ್ಲಿ ಉದಾಹರಣೆಗಾಗಿ ಬಳಸಿದ್ದೀನಿ, ಅಷ್ಟೇ.

ಇದನ್ನು ಓದಿ ನೀವು 'ಇದು' ಬಳಕೆ ಬಗ್ಗೆ ಎಷ್ಟು ಇದಾಗಿ ಬರೆದಿದ್ದಾರೆ ಅಂದ್ರೆ 'ಚೆನ್ನಾಗಿದೆ' interesting/amusing ಅಂತಲೂ ಆಗಬಹುದು ಅಥವಾ ತಿಪ್ಪರಲಾಗ ಹಾಕಿ 'ಕೆಟ್ಟದಾಗಿದೆ' boring ಅಂತಲೂ ಆಗಬಹುದು depending on the tone used! ಹೀಗೆ ಸಂದರ್ಭ, ಸನ್ನಿವೇಶ ಮತ್ತು ಹೇಳುವ ರೀತಿಯಿಂದ 'ಇದರ' ಅರ್ಥ ಗೊತ್ತಾಗುತ್ತೆ. 'ಇದರ' ಬಗ್ಗೆ ಬರೆಯುತ್ತಾ ಹೋದರೆ ಅದು ಹನುಮಂತನ ಬಾಲದಂತೆ ಬೆಳೀತಾನೇ ಹೋಗುತ್ತೆ.

'ಇದನ್ನು' ಜನ ಎಲ್ಲೆಲ್ಲಿ ಯಾವ್ಯಾವ ಅರ್ಥದಲ್ಲಿ ಹೇಗೆ ಬಳಸುತ್ತಾರೆಂಬುದು ಗಮನಿಸಲು ಇಂದಿನಿಂದಲೇ ಶುರುಮಾಡಿ. ಸಂಭ್ರಮ, ಸಂತೋಷ, ಕಿರಿಕಿರಿ, ಹಟ, ಮುಜುಗರ, ತೊಂದರೆ, ನೋವು, ನೆಮ್ಮದಿ, ಸುಸ್ತು, ಕಳಕಳಿ, ದಾಹ, ಹಸಿವು, ಚೆನ್ನಾಗಿ, ಕೆಟ್ಟದಾಗಿ, ರುಚಿಯಾಗಿ, .... ಹೀಗೇ ಪಟ್ಟಿ ಮಾಡುತ್ತಾ ಹೋದ್ರೆ ಕೆಲವು ಪುಟಗಳೇ ತುಂಬಿಸಬಹುದು. 'ಇದು' ತುಂಬಾನೇ contradictory ನಾನಾರ್ಥಗಳನ್ನು ಹೊಂದಿರುವ ಪದ ಎಂದನಿಸಿದರೆ ಆಶ್ಚರ್ಯವೇನಿಲ್ಲ. ಏನ್ ಗೊತ್ತಾ? ಈ ಅರ್ಥಗಳು ಆಡುಭಾಷೆಯಲ್ಲಿ ಮಾತ್ರ ಲಭ್ಯ. ನೀವು ಎಷ್ಟು ಇದರಾಗಿ (ಕಷ್ಟಪಟ್ಟು) ಹುಡುಕಿದರೂ ನಿಮಗೆ ಯಾವ ನಿಘಂಟಿನಲ್ಲೂ ಇವು ಕಾಣ ಸಿಗುವುದಿಲ್ಲ. ಇದನ್ನು ನಮ್ಮ ಕನ್ನಡದ ಆಡುಭಾಷೆಯ ಸೊಗಡು ಅಥವಾ ಸೊಬಗು ಎನ್ನಬಹುದೇ? ಇದನ್ನು ಆಸ್ವಾದಿಸಲು **ಈ ಯುಗಾದಿಯಿಂದಲೇ ಹೆಚ್ಚು ಹೆಚ್ಚು ಕನ್ನಡದಲ್ಲಿ ಮಾತನಾಡಲು ಶುರುಮಾಡಿ. Enjoy ಮಾಡಿ.**

"ಈಸಲದ ಯುಗಾದಿ ಸಂಚಿಕೆಗೆ ಮಕ್ಕಳಿಗೋಸ್ಕರ ಏನಾದ್ರೂ ಬರೆದು ಕಳಿಸಿ" ಅಂತ ತುಂಬಾ 'ಇದು' (ಅಭಿಮಾನದಿಂದ ಒತ್ತಾಯ) ಮಾಡಿದ ಮತ್ತು ಕನ್ನಡದ ಕಂಪನ್ನು ಎಲ್ಲೆಡೆಗೂ ಹರಡುವುದಕ್ಕೆ ಶ್ರಮಿಸುತ್ತಿರುವ ಕಂಪು ಬಳಗಕ್ಕೆ ಮತ್ತು ನಿಮ್ಮೆಲ್ಲರಿಗೂ ಯುಗಾದಿಯ ಹಾರ್ದಿಕ ಶುಭಾಶಯಗಳು. **MKANT** ನ ಈವರ್ಷದ ಯುಗಾದಿಯ ಆಚರಣೆ ಹಿಂದಿನವರ್ಷಗಳಿಗಿಂತ ಹೆಚ್ಚು ಇದರಿಂದ (ಸಡಗರ ಸಂಭ್ರಮಗಳಿಂದ) ಕೂಡಿದ್ದು ನಿಮ್ಮೆಲ್ಲರ ಮನರಂಜಿಸಲೀ. ಹೊಸವರ್ಷದಲ್ಲಿ ನಿಮ್ಮ ಹೊಸ ಕನಸುಗಳೆಲ್ಲ ನನಸಾಗಲೀ. ಎಲ್ಲರಿಗೂ ಒಳಿತಾಗಲೀ ಎಂದು ಹಾರೈಸುತ್ತಾ 'ಇದರ' ಪುರಾಣದಿಂದ ಒಂದು ಚಿಕ್ಕ break ತೆಗೆದುಕೊಳ್ಳಲೇ?

ರಾಮನು ಕಾಡಿಗೆ ಹೋದನು - ಇದು ಯಾವ ಕಾಲ ?
ರಾಮನಿಗೆ ಕೆಟ್ಟ ಕಾಲ

## ಹೀಗೊಂದು ರಾಮನವಮಿ

- ಪೂರ್ಣಿಮ ಸುಬ್ರಹ್ಮಣ್ಯ

ರಾಮನವಮಿಯ ದಿವಸ
ಕೋಸಂಬರಿಯು ರುಚಿಯಾಗಿ
ಪಾನಕವು ಸಿಹಿಯಾಗಿ
ರಾಮನಾಮಾಮೃತವು
ಕಿವಿಯ ತುಂಬಿ



ಅಭಿಷೇಕ ಅಲಂಕಾರ
ಗಾನ ನಾಟ್ಯ ಕಥಾಸಾರ
ಮುತ್ತಿನ ಪಲ್ಲಕ್ಕಿ ರಥೋತ್ಸವ
ಎಂಥಾ ಸಂಸ್ಕೃತಿ! ವೈಭವ !!

ರಾಮ
ಸೀತಾರಾಮ
ನಿಜಗುಣಧಾಮ
ಮರ್ಯಾದಾ ಪುರುಷೋತ್ತಮ !

ಎಲ್ಲರಿಗೂ ಬೇಕು
ಶ್ರೀರಾಮನಂತಹ ಮಗ
ತಂದೆ ಮಾತನು ಉಳಿಸೆ
ಕಾಡಿಗೆ ಹೋದ ರಾಮ

ಹೆಣ್ಣು ಮಕ್ಕಳ ಕನಸು
ಶ್ರೀರಾಮನಂತಹ ಗಂಡ
ಭೂಜಾತೆ ಸೀತೆಯನು
ಕೈಹಿಡಿದು ಕಾಪಾಡಿ
ಕಾಡಿಗಟ್ಟುವ ಮುನ್ನ
ಬೆಂಕಿಗೊಡ್ಡಿದ ರಾಮ !!

ಅಂದು ವನವಾಸಿ
ಇದೇ ರಾಮನ ಹಿಂದೆ
ನಡೆದವಳು ನಮ್ಮ ಹುಡುಗಿ
ಅಹುದಹುದು, ಅದುವೇ ಸರಿ
ತರುಣಿಗೆ ಪತಿ ದೈವಂ !

ಅಯ್ಯೋ ರಾಮ!
ನೆನಪಿಲ್ಲವೇ ನಿನಗೆ
ಅದೆಲ್ಲ ಅಮೃತ ಘಳಿಗೆ ?
ಹೆಚ್ಚಾಯಿತೇ ನಿನಗೆ
ಅಗಸನೊಬ್ಬನ ಕಟಕಿ
ಕಾಣಲಿಲ್ಲವೇ ಎದುರು
ತುಂಬು ಬಸುರಿ ಜಾನಕಿ ?

ಲೋಕಾಪವಾದಕ್ಕೆ
ರಾಮ ಹೆದರಿದನಂತೆ
ಈ ನೀತಿಸಂಹಿತೆಗೆ
ಬೆಲೆ ತೆತ್ತವಳು ಸೀತೆ
ಇದ್ದರೆ ನಾವು ಅವಳಂತೆ
ಲೋಕದಿ ಬಲು ಹಿತವಂತೆ !

ರಾಮನವಮಿಯ ದಿವಸ
ರಾಮನಾಮಾಮೃತವು
ಕಿವಿಯ ತುಂಬಿದರೂ...
ಅಲ್ಲೆಲ್ಲೋ ಕೇಳಿತು
ಸೀತೆಯ ವ್ಯಥೆಯ ದನಿ.


ರಾಮನವಮಿಯ ದಿವಸ
ಪಾನಕದ ಸಿಹಿಯಿದ್ದರೂ
ಹೋಗದು ಹಾಳು ಕಹಿ
ಏನು ಮನಸೋ ?
ಅಯ್ಯೋ! ರಾಮ! ರಾಮ!!



ರಾಮಾಯಣದ ನೀತಿ ಏನು ?
ಹೆಂಡತಿಗೆ ಮಾತು ಕೊಡಬಾರದು , ಕೊಟ್ಟರೂ ಅದಕ್ಕೆ ಎಕ್ಸ್ಪೈರಿ ಡೇಟ್ ಮರೆಯಬಾರದು

## ಅಧ್ಯಕ್ಷರ ಸಂದೇಶ

- ರಾಜಶ್ರೀ ರಮೇಶ್



**ಮ**ಲ್ಲಿಗೆ ಸಂಘದ ನನ್ನ ಪ್ರೀತಿಯ ಬಂಧು ಮಿತ್ರರಿಗೆ,

ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು! ಈ ನಂದನ ನಾಮ ಸಂವತ್ಸರ ನಿಮಗೆಲ್ಲ ಒಳ್ಳೆ ಆರೋಗ್ಯ, ಯಶಸ್ಸು ತರಲಿ ಎಂದು ಆಶಿಸುತ್ತೀನಿ. ಬೇವು-ಬೆಲ್ಲ ಅಥವ ಯುಗಾದಿ ಪಚ್ಚಡಿ ತಿಂದು, ಜೀವನದ ಮಿಶ್ರಣವಾದ ಸುಖ, ದುಖ, ಕೋಪ, ಭಯ, ಆಶ್ಚರ್ಯ ಮತ್ತು ಅಸಹನೀಯತೆಯನ್ನು ಸಮಭಾವದಿಂದ ಸ್ವೀಕರಿಸುತ್ತೀವಿ ಎಂದು ಆಶಿಸೋಣ.

ಎಲ್ಲರ ಮನೆಯಲ್ಲೂ ಹಬ್ಬದ ಸಡಗರ. ಅದನ್ನು ಇನ್ನು ಸ್ವಲ್ಪ ಹೆಚ್ಚಿಸಲು ಇಲ್ಲಿದೆ ಕಂಪು.

ಕಳೆದ ಎರಡು ವರ್ಷದಿಂದ ಮಲ್ಲಿಗೆ ಬಂಧುಗಳ ಸಹಕಾರ ಹಾಗು ಶ್ರೀಮತಿ ಪೂರ್ಣಿಮ ಸುಬ್ರಹ್ಮಣ್ಯ ಅವರ ನೇತೃತ್ವದಲ್ಲಿ ಕಂಪು ತುಂಬ ಚೆನ್ನಾಗಿ ಮೂಡಿ ಬರುತ್ತಿದೆ. ಚಿಕ್ಕ ವಯಸ್ಸಿನಿಂದಲು ಕನ್ನಡ ಕಥೆ, ಕವನ ಓದುವುದೊಂದೆ ಹವ್ಯಾಸವಾಗಿತ್ತು, ನನಗೆ. ಕಂಪುವಿನ ಮೂಲಕ ಬರೆಯುವ ಪ್ರಯತ್ನ ಮಾಡಲು ಅವಕಾಶ ಸಿಕ್ಕಿತು.

ಇದು ನಾನು ಮಲ್ಲಿಗೆ ಸಂಘದ ಅಧ್ಯಕ್ಷೆ ಆಗಿ ಬರೆಯುತ್ತಿರುವ ಕೊನೆಯ ಸಂಚಿಕೆ. ನಿಮಗೆಲ್ಲ ತಿಳಿದಿರುವ ಹಾಗೆ, ಮಲ್ಲಿಗೆ ಸಂಘದ ಪ್ರಸ್ತುತ ಕಾರ್ಯಕಾರಿ ಸಮಿತಿಯ ಎರಡು ವರ್ಷದ ಕಾಲಾವಧಿ, ಈ ವರ್ಷದ ಯುಗಾದಿ ಆಚರಣೆಯೊಂದಿಗೆ ಮುಗಿಯುವುದು. ನಿಮ್ಮೆಲ್ಲರಿಗು ತಿಳಿದ ಹಾಗೆ ಹೊಸ ಸಮಿತಿ ಆಯ್ಕೆಯಾಗಿದೆ.

ಹಳೇದು-ಹೊಸದು ಅನ್ನೊವಾಗ, ಕಳೆದ ವಾರವಷ್ಟೆ ೧೨೫ನೆ ವರ್ಷದ ಹುಟ್ಟು ಹಬ್ಬ ಆಚರಿಸಿದ, ನನ್ನ ಹಾಗು ಅನೇಕ ಕನ್ನಡಿಗರ ಅಚ್ಚುಮೆಚ್ಚಿನ ಬರಹಗಾರರು, ವೇದಾಂತಿಗಳು ಆದ ಪದ್ಮಭೂಷಣ ಡಾ. ಡೀ. ವೀ. ಗುಂಡಪ್ಪ ನವರು ಬರೆದ ಮಂಕುತಿಂಮ್ಮನ ಕಗ್ಗದ ನುಡಿ ಹೇಳಬೇಕೆನಿಸುತ್ತೆ.

ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಗಸು
ಹೊಸ ಯುಕ್ತಿ ಹಳೆ ತತ್ವದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ
ಜಸವು ಜನಜೀವನಕೆ ಮಂಕುತಿಮ್ಮ



ಮಲ್ಲಿಗೆ ಸಂಘದ ಕಾರ್ಯಕಾರಿ ಸಮಿತಿ ಹಾಗು ನಿಮ್ಮೆಲ್ಲರ ಪರವಾಗಿ ಹೊಸ ಕಾರ್ಯಕಾರಿ ಸಮಿತಿ ಅಧ್ಯಕ್ಷೆಯಾಗಿ ಚುನಾಯಿತರಾಗಿರುವ ಶ್ರೀಮತಿ ಜಯಶ್ರೀ ಮೂರ್ತಿ ಅವರಿಗೆ ನನ್ನ ಅಭಿನಂದನೆಗಳು. ಡಲ್ಲಸ್-ಫೋರ್ಟ್‌ವರ್ತ್ ಮಹಾನಗರದಲ್ಲಿ ವಾಸವಾಗಿರುವ ಅನೇಕ ಕನ್ನಡಿಗರಿಗೆ ಇವರು ಚಿರಪರಿಚಿತರು. ಪ್ರಸ್ತುತ ಸಮಿತಿಯಲ್ಲಿ ಮನೋರಂಜನ ಕಾರ್ಯಕ್ರಮಗಳ ಆಯೋಜಕಿಯಾಗಿ ಸೇವೆ ಸಲ್ಲಿಸುವ ಮೊದಲು, ಮಲ್ಲಿಗೆ ಸಂಘದ ಆಚರಣೆಗಳಲ್ಲಿ ಸತತವಾಗಿ ಪಾಲ್ಗೊಳ್ಳುತ್ತಿದ್ದರು.

ಈ ಇಬ್ಬರಲ್ಲಿ ಯಾರು ಹೆಚ್ಚು ಬುದ್ಧಿವಂತರು - ಸೀತೆ, ಜಿರಳೆ ?
ಜಿರಳೆ, ಅವು ಲಕ್ಷ್ಮಣ ರೇಖೆ ದಾಟುವುದಿಲ್ಲ

ನನ್ನ ಮಲ್ಲಿಗೆ ಬಂಧು-ಮಿತ್ರರೆ, ನೀವು, ನನಗೆ, ನನ್ನ ಸಮಿತಿ ಸದಸ್ಯರಿಗೆ ಕೊಟ್ಟ ಪ್ರೋತ್ಸಾಹ ಹಾಗು ಬೆಂಬಲವನ್ನು ನಾನು ಮರೆಯಲಾರೆ. ಅದೇ ರೀತಿ ಮುಂಬರುವ ಸಮಿತಿ ಸದಸ್ಯರಿಗೂ ಬೆಂಬಲ ನೀಡಿ, ಈ ನಿಮ್ಮ ಮಲ್ಲಿಗೆ ಸಂಘವನ್ನು ಉತ್ತರ ಅಮೇರಿಕಾದ ದೊಡ್ಡ ಸಂಘಗಳಲ್ಲೊಂದು ಮಾಡಲು ಮುಂದೆ ಬರಬೇಕೆಂದು ಕೇಳಿಕೊಳ್ಳುತ್ತೀನಿ. ಶ್ರೀಮತಿ ಜಯಶ್ರೀ ಅವರ ಹೊಸ ಸಮಿತಿ ಸದಸ್ಯರನ್ನು ನಮ್ಮ ಯುಗಾದಿ ಆಚರಣೆ ಸಂದರ್ಭದಲ್ಲಿ ನೀವೆಲ್ಲ ಭೇಟಿ ಮಾಡಬಹುದು.

ಮಲ್ಲಿಗೆ ಬಂಧುಗಳ ಕಥೆ, ಕವನ, ಸಾಹಿತ್ಯದ ಆಸಕ್ತಿಯನ್ನು ಪ್ರೋತ್ಸಾಹಿಸಬೇಕೆಂದು ನಾನು ಕಂಡ ಕನಸು, ನನ್ನ ಸ್ನೇಹಿತೆ ಶ್ರೀಮತಿ. ಪೂರ್ಣಿಮ ಸಹಾಯದಿಂದ ಕಂಪು ಈ-ಪತ್ರಿಕೆ ಮೂಲಕ ನೆರವೇರಿತು. "ಕಂಪು"ವಿನ ಕಂಪು ಇನ್ನೂ ಹೆಚ್ಚು ಹರಡಲಿ ಎಂದು ಆಶಿಸುತ್ತೀನಿ.

ಬೇಕು ಬೇಕದು ಬೇಕು ಬೇಕಿದೆ ನನಗಿನ್ನೊಂದು......... ಕಂಪು ಮೂಲಕ ಭೇಟಿ ಆಗ್ತಾ ಇರುತ್ತೀನಿ.

ಮಲ್ಲಿಗೆ ಸಂಘದ ಯುಗಾದಿ - ೨೦೧೨ ಕಾರ್ಯಕ್ರಮ ಆಚರಿಸಲು ತಯಾರಿಗಳು ಶುರು ಆಗಿದೆ. ನೀವು, ನಿಮ್ಮವರೆಲ್ಲ, ನಮ್ಮೆಲ್ಲರೊಡನೆ ಆಚರಿಸಲು ಬನ್ನಿ!



ಮತ್ತೊಮ್ಮೆ ಎಲ್ಲರಿಗೂ ನಂದನ ನಾಮ ಸಂವತ್ಸರದ ಶುಭಾಶಯಗಳು!

ಎಲ್ಲಾದರು ಇರು ಎಂತಾದರು ಇರು ಎಂದೆಂದು ಕನ್ನಡವಾಗಿರು
ಜೈ ಹಿಂದ್! ಜೈ ಕರ್ನಾಟಕ!

ಇಂತಿ ನಿಮ್ಮ ವಿಶ್ವಾಸಿ
ರಾಜಶ್ರೀ ರಮೇಶ್

## MKANT Yugaadi 2012.

**Venue: MCL Grand Theater**
100, N.Charles Street (Between Main St. and Church St.)
Old Town of Lewisville, TX

**Date: 31st March 2012**
Time: 3 PM till 4 PM - Meet and Greet
4:15 PM till 7:30 PM - Cultural Programs
8 PM - Dinner

## ಪರಿಚಯ

- ಮೀನಾ ಭಾರದ್ವಾಜ್



### ಮಹೇಶ್ ಕೋಟಗಿ



ಇಲ್ಲಿ ನೆಲೆಸಿರುವ ಭಾರತೀಯರು ಒಬ್ಬ ಸಚಿನ್ ತೆಂಡೂಲ್ಕರ್ ತಮ್ಮ ಮನೆಯಲ್ಲಿ ಉದಯಿಸುವ ಕನಸು ಕಂಡರೆ, ಅಥವಾ ಸೋನು ನಿಗಮ್ ತರಹ ತಮ್ಮ ಮಕ್ಕಳು ಹಾಡು ಹಾಡಬಹುದೆಂದು ಬಯಸಿದರೆ,ಇಷ್ಟು ಮೀರಿ ತಮ್ಮ ಮಕ್ಕಳು ಸ್ಪೆಲ್ಲಿಂಗ್ ಬೀ ಚಾಂಪಿಯನ್ ಆಗುತ್ತಾರೆಂದರೆ ಯಾರೂ ಆಶ್ಚರ್ಯ ಪಡುವುದೇ ಇಲ್ಲ . ನಮ್ಮ ಮಕ್ಕಳು ಜರಿಮಿ ಲಿನ್ ತರಹ ಬಾಸ್ಕೆಟ್ ಬಾಲ್ ಆಡುತ್ತಾರೆ ಅಥವಾ ಸ್ಥಳೀಯ NFLನಲ್ಲಿ ಭಾಗವಹಿಸುತ್ತಾರೆ ಎಂದರೆ ಊಹಿಸಲಾಗದ ವಿಷಯ ಎನ್ನುವುದು ಹಲವರ ಭಾವನೆ. ಕನಸುಗಳ ಬೆನ್ನೇರಿದರೆ ಅಸಾಧ್ಯವೆನ್ನುವುದು ಯಾವುದೂ ಇಲ್ಲ . ರಸ್ಸಲ್ ಪೀಟರ್ ಹಾರಿಸುವ ನಗೆ ಚಟಾಕಿಗಳನ್ನು ನೋಡಿ ಹಾಗು ಕೇಳಿ ಅನಂದಿಸಿರುವ ನಮಗೆ, ನಮ್ಮ ಮಧ್ಯೆ ಬೆಳೆದ ಕನ್ನಡ ಬಾಲಕ ಇದೇ ರೀತಿ ನಗೆ ಚಟಾಕಿಗಳನ್ನು ಹಾರಿಸುತ್ತಾನೆ, ಅವನು ನಡೆಸುವ ಷೋಗಳಿಗೆ ಜನರು ಟಿಕೆಟ್ ಪಡೆದು ಹೋಗುತ್ತಾರೆಂದರೆ ನಿಮಗೆ ಆಶ್ಚರ್ಯವಾಗಬಹುದು.

ಇಲ್ಲಿ ನಾನು ಹೇಳ ಬಯಸಿರುವುದು ಮಹೇಶ್ ಕೋಟಗಿಯ ಬಗ್ಗೆ. ಸಂಘದ ಸದಸ್ಯರಾದ ಶ್ರೀಮತಿ ಗಂಗಾ ಹಾಗು ಶ್ರೀ ಸಿದ್ರಾಮ ಕೋಟಗಿಯವರ ಪುತ್ರ. ಶಾಲಾ ದಿನಗಳಲ್ಲಿ ಟೆನ್ನಿಸ್ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದುದಲ್ಲದೆ ಇವನಿಗೆ ಚರ್ಚಾ ಸ್ಪರ್ಧೆಗಳಲ್ಲಿ ವಿಶೇಷ ಆಸಕ್ತಿ. ಅರಳು ಹುರಿದಂತೆ ಮಾತಾಡುವ ಕಲೆ ಇವನಿಗೆ ಕರಗತವಾಗಿರುವುದರಿಂದ, ತನ್ನ ಬಿಡುವಿನ ಸಮಯದಲ್ಲಿ standup comedy ಮಾಡುವಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುತ್ತಾನೆ. ಕಳೆದ ಎರಡು ವರ್ಷಗಳಿಂದ ಆಸ್ಟಿನ್, ನ್ಯೂಯಾರ್ಕ್, ನ್ಯೂಜೆರ್ಸಿ ಪ್ರದೇಶಗಳಲ್ಲಿ ಸತತವಾಗಿ ಯಶಸ್ವೀ ಪ್ರದರ್ಶನಗಳನ್ನು ಕೊಟ್ಟಿರುತ್ತಾನೆ. ಆಸ್ಟಿನ್ ನಗರದ ಪ್ರತಿಷ್ಟಿತ ಕಾಮಿಡಿ ಕ್ಲಬ್ ಗಳಲ್ಲಿ ಒಂದಾದ The Velveeta Room, Cap City Comedy Club, and Coldtowne Theater ನಲ್ಲಿ ಪ್ರದರ್ಶನವನ್ನಿತ್ತಿದ್ದಾನೆ. ನ್ಯೂಜೆರ್ಸಿ ಪ್ರದೇಶದಲ್ಲಿ ಹೆಸರುವಾಸಿಯಾದ Stress Factory ಯಲ್ಲದೆ ಪ್ರತಿಷ್ಠಿತ ಟಿ ವಿ ಚಾನೆಲ್ ಗಳಲ್ಲಿ ಒಂದಾದ NBCಯಲ್ಲಿ , The Broadway Comedy Club , ನ್ಯೂಯಾರ್ಕ್ ನಗರದ ಮ್ಯಾನ್ ಹ್ಯಾಟನ್ನಲ್ಲಿರುವ Caroline's on Broadway ಯಲ್ಲೂ ಕಾಮಿಡಿ ಪ್ರದರ್ಶನಗಳನ್ನು ನೀಡಿರುತ್ತಾನೆ.




Mahesh Kotagi is from Carrollton Texas. He graduated from the University of Texas at Austin in 2007 with a Bachelors of Science in Human Biology. He earned his Doctor of Pharmacy degree from the Texas A&M Health Science Center Rangel College of Pharmacy in 2011. After completing his pharmacy education, Mahesh was accepted into one of the most competitive Pharmaceutical Industry Fellowship Programs in the country, the Rutgers Pharmaceutical Industry Fellowship Program. He is completing a two year fellowship in Oncology. He works at Bristol-Myers Squibb in New Jersey specializing in oncology clinical trials and medical information.

ಸ್ಪರ್ಧಾತ್ಮಕ ಮನೋಭಾವನೆಯ ಪ್ರಪಂಚದಲ್ಲಿ ಕೆಲಸದ ಒತ್ತಡ, ಸಾಮಾಜಿಕ ಒತ್ತಡ ಹೀಗೆ ಒತ್ತಡದ ಮಧ್ಯವೇ ಕಳೆಯುವ ನಾವು ಒಂದು ಆಹ್ಲಾದಕರ ನಗೆ ನಮ್ಮ ಆಯುಷ್ಯವನ್ನೇ ಹೆಚ್ಚಿಸಬಹುದು ಎನ್ನುವುದನ್ನು ಸಹ ಮರೆಯುತ್ತೇವೆ. ಇಂತಹ ಸಮಯದಲ್ಲಿ ತನ್ನ ಹಾಸ್ಯ ಚಟಾಕಿಗಳಿಂದ ಜನರನ್ನು ನಗೆಗಡಲಲ್ಲಿ ತೇಲಿಸಲಿ ಎಂದು ಮಹೇಶ್ ಕೋಟಗಿಗೆ ಮಲ್ಲಿಗೆ ಕನ್ನಡ ಸಂಘವು ಶುಭ ಕೋರುತ್ತದೆ.

ಶೂರ್ಪಣಖಿಗು ಮಾಟಗಾತಿಯರಿಗೂ ವ್ಯತ್ಯಾಸ ಏನು ?

ಅವಳು ಶೂರ್ಪನಖಿ , ಇವರು sharpನಖಿ

# ಅವಲಕ್ಕಿ ಬಿಸಿಬೇಳೆಭಾತ್

- ವೀಣಾ ಜನಕ್



**ಸಾಮಗ್ರಿಗಳು:**

1 ಕಪ್ ಗಟ್ಟಿ ಅವಲಕ್ಕಿ

1/2 ಕಪ್ ತೊಗರಿ ಬೇಳೆ

ಸಣ್ಣ ನಿಂಬೇ ಗಾತ್ರ ಹುಣಸೆ ಹಣ್ಣು

3 ಕಪ್ ತರಕಾರಿ ಮಿಶ್ರಣ (ಕ್ಯಾರೆಟ್, ಹುರಳಿ ಕಾಯೀ, ಆಲೂಗೆಡ್ಡೆ, ಬಟಾಣಿ, ಲಿಮಾ ಬೀನ್ಸ್)

4 ಟೇಬಲ್ ಚಮಚ ಬಿಸಿ ಬೇಳೆ ಭಾತ್ ಪುಡಿ (ರೆಸಿಪಿ ಮುಂದೆ)

2 ಟೀ ಚಮಚ ಉಪ್ಪು

**ಒಗ್ಗರಣೆ:**

2 ಟೇಬಲ್ ಚಮಚ ತುಪ್ಪ

1 ಟೀ ಚಮಚ ಸಾಸಿವೆ

1/4 ಟೀ ಚಮಚ ಇಂಗು

2 ಟೇಬಲ್ ಚಮಚ ಕಡಲೆಕಾಯಿ ಬೀಜ

1 ಟೇಬಲ್ ಚಮಚ ಗೋಡಂಬಿ

ಕರಿಬೇವು ಹತ್ತು ಎಲೆ



**ಬಿಸಿ ಬೇಳೆ ಭಾತ್ ಪುಡಿ ಮಾಡುವ ವಿಧಾನ:**

(ಈ ಪುಡಿಯನ್ನು ಮೊದಲೆ ಮಾಡಿಕೊಂಡು ಏರ್ ಟೈಟ್ ಡಬ್ಬಿಯಲ್ಲಿ ಇಡಬಹುದು)

2 ಟೇಬಲ್ ಚಮಚ ಉದ್ದಿನ ಬೇಳೆ

2 ಟೇಬಲ್ ಚಮಚ ಕಡಲೆ ಬೇಳೆ

1/4 ಕಪ್ ಕೊತ್ತಂಬರಿ ಬೀಜ

1/4 ಕಪ್ ಒಣ ಮೆಣಸಿನ ಕಾಯಿ

1/2 ಟೀ ಚಮಚ ಮೆಂತ್ಯ

1/4 ಟೀ ಚಮಚ ಇಂಗು

1 ಸಣ್ಣ ತುಂಡು ಚಕ್ಕೆ

2 ಲವಂಗ

2 ಏಲಕ್ಕಿ

1/2 ಟೀ ಚಮಚ ಅರಿಶಿನ

1/2 ಕಪ್ ಒಣ ಕೊಬ್ಬರಿ

1 ಟೀ ಚಮಚ ಎಣ್ಣೆ

ಮೇಲೆ ಹೇಳಿರುವ ಎಲ್ಲಾ ಸಾಮಗ್ರಿಗಲನ್ನು ಒಂದು ಟೀ ಚಮಚ ಎಣ್ಣೆಯಲ್ಲಿ ಹುರಿದು ಸ್ಟೋವ್ ಆರಿಸಿದ ನಂತರ ಕೊಬ್ಬರಿ ಸೇರಿಸಬೇಕು. ಮಿಶ್ರಣ ಆರಿದ ನಂತರ ಮಿಕ್ಸಿಯಲ್ಲಿ ಪುಡಿ ಮಾಡಿ ಇಟ್ಟುಕೊಳ್ಳ ಬೇಕು.

**ಮಾಡುವ ವಿಧಾನ:**

೧. ಪ್ರೆಜರ್ ಕುಕ್ಕರಿನಲ್ಲಿ ತೊಗರಿ ಬೇಳೆಯನ್ನು ಚಿಟಕೆ ಅರಿಶಿನ ಹಾಕಿ ಬೇಯಿಸಿಕೊಳ್ಳಬೇಕು.

೨. ಹುಣಸೆ ಹಣ್ಣನ್ನು ಕಾಲು ಕಪ್ ನೀರಿನಲ್ಲಿ ಕಾಲು ಗಂಟೆಗಳ ಕಾಲ ನೆನೆಸಿ ರಸ ತೆಗೆದು ಇಟ್ಟುಕೊಳ್ಳಬೇಕು.

೩. ಗಟ್ಟಿ ಅವಲಕ್ಕಿಯನ್ನು ಕಾಲು ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ ನಂತರ ನೀರನ್ನು ಬಸಿದು ಇಟ್ಟುಕೊಳ್ಳಬೇಕು.

೪. ಎರಡು ಕಪ್ ನೀರನ್ನು ಅಗಲದ ಪಾತ್ರೆಯಲ್ಲಿ ಕುದಿ ಬರಿಸಿ ಅಧಕ್ಕೆ ಒಂದು ಚಿಟಕೆ ಉಪ್ಪು ಮತ್ತು ತರಕಾರಿಯ ಮಿಶ್ರಣವನ್ನು ಹಾಕಬೇಕು.

೫.ಪಾತ್ರೆಯ ಮುಚ್ಚಳ ಮುಚ್ಚಿ 3/4 ಬೆಂದ ಮೇಲೆ ಕುಕ್ಕರಿನಲ್ಲಿ ಬೇಯಿಸಿದ ತೊಗರಿ ಬೇಳೆ ಮತ್ತು ಹುಣಸೆ ನೀರನ್ನು ಹಾಕಬೇಕು.

೬. ಬಿಸಿ ಬೇಳೆ ಭಾತ್ ಪುಡಿಯನ್ನು ಸ್ವಲ್ಪ ನೀರಿನಲ್ಲಿ ಬೆರೆಸಿ ತರಕಾರಿ ಮತ್ತು ತೊಗರಿ ಬೇಳೆಯೊಂದಿಗೆ ಬೆರೆಸಬೇಕು. ಹೀಗೆ ಮಾಡುವುದರಿಂದ ಪುಡಿ ಗಂಟು ಕಟ್ಟುವುದಿಲ್ಲ.

೭. ಪಾತ್ರೆಯ ಮುಚ್ಚಳ ತೆಗೆದಿಟ್ಟು 5 ನಿಮಿಷ ಕುದಿಯಲು ಬಿಡಬೇಕು.

೮. ನೀರಿನಲ್ಲಿ ನೆನೆಸಿ ತೆಗೆದ ಅವಲಕ್ಕಿಯನ್ನು ತರಕಾರಿ, ಬೇಳೆಯೊಂದಿಗೆ ಸೇರಿಸಬೇಕು. ಅವಲಕ್ಕಿ ಬೇಯಲು ಸುಮಾರು ೮ ನಿಮಿಷ ಆಗುವುದು.

೯. ಮಧ್ಯೆ ಒಂದೆರಡು ಸಲ ಕೆದಕುತ್ತಾ ರುಚಿಗೆ ತಕ್ಕಷ್ಟು ಉಪ್ಪು ಬೆರೆಸಬೇಕು.

೧೦. ಸಣ್ಣ ಬಾಂಡಲೆಯಲ್ಲಿ ಎರಡು ಟೇಬಲ್ ಚಮಚ ತುಪ್ಪ ಬಿಸಿ ಮಾಡಿ, ಸಾಸಿವೆ, ಇಂಗು, ಕಡಲೆಕಾಯಿ ಬೀಜ, ಕರಿಬೇವು ಒಗ್ಗರಣೆ ಮಾಡಿಕೊಳ್ಳಬೇಕು.

೧೧. ಒಗ್ಗರಣೆಯನ್ನು ಬಿಸಿಬೇಳೆಭಾತಿಗೆ ಸೇರಿಸಬೇಕು.

೧೨. ಸ್ಟೋವ್ ಇಂದ ಪಾತ್ರೆ ಇಳಿಸಿ 5 ನಿಮಿಷ ಮುಚ್ಚಳ ಮುಚ್ಚಿ ಇಟ್ಟಿರಬೇಕು.

೧೩. ರುಚಿ ರುಚಿಯಾದ ಅವಲಕ್ಕಿ ಬಿಸಿಬೇಳೆಭಾತ್ ತಯಾರು.

೧೪. ಗರಿ ಗರಿಯಾದ ಆಲುಗೆಡ್ಡೆ ಚಿಪ್ಸ್ ಒಂದಿಗೆ ಸವಿಯಿರಿ.

ಹನುಮಂತನು ಲಂಕೆಯಲ್ಲಿ ಮೊದಲ ಹೆಜ್ಜೆ ಇಟ್ಟ ತಕ್ಷಣ ಏನು ಮಾಡಿದನು ?

ಎರಡನೇ ಹೆಜ್ಜೆ ಇಟ್ಟನು .

## ಕರ ಕುಶಲೆ - ಉಮಾ ಸರ್ವೇಶ್

- ಮೀನಾ ಭಾರದ್ವಾಜ್





**ಸಾ**ಮಾನ್ಯವಾಗಿ ಸಿನೆಮಾದಲ್ಲೋ, ಟಿವಿ ಧಾರಾವಾಹಿಯಲ್ಲೋ ಕಂಡು ಬರುವ ದೃಶ್ಯ. ಗಂಡ ಆಫೀಸ್ ನಿಂದ ಬರುತ್ತಾನೆ, ಬಂದ ಗಂಡನನ್ನು ಏನಾದರೂ ಪ್ರಶ್ನೆ ಕೇಳಿದರೆ ಗೃಹಿಣಿಗೆ ಬರುವ ಉತ್ತರ "ಬೆಳಿಗ್ಗೆಯಿಂದ ಮನೆಯಲ್ಲೇ ಇದ್ದೆ ಏನು ಮಾಡ್ತಾ ಇದ್ದೆ?". ಮನೆ ಕೆಲಸದ ಜೊತೆ ನೂರೆಂಟು ಕೆಲಸಗಳನ್ನು ನಿಭಾಯಿಸಬಲ್ಲ ಗೃಹಿಣಿಯರು, ಎಲ್ಲಾ ಕೆಲಸವನ್ನು ಸರಿ ಸಮಾನವಾಗಿ ಹಂಚಿಕೊಳ್ಳುವ ಗಂಡಸರು ಇರುವುದರಿಂದ ಮೇಲಿನ ಪ್ರಶ್ನೆ ಅಮೇರಿಕಾದ ಜೀವನ ಶೈಲಿಗೆ ಖಂಡಿತಾ ಅನ್ವಯಿಸುದಿಲ್ಲ. ಒಂದು ವೇಳೆ ಮನೆಯಲ್ಲೇ ಇರುವ ಗೃಹಿಣಿಯರು ಯಾವ ರೀತಿಯಲ್ಲಿ ತಮ್ಮನ್ನು ತಾವು ಬ್ಯುಸಿ ಇಟ್ಟು ಕೊಳ್ಳಬಹುದು ಅಥವಾ ಇರುವ ಸಮಯದಲ್ಲಿ ಏನೆಲ್ಲ ಮಾಡಬಹುದು ಎನ್ನುವುದನ್ನು ನೋಡಬೇಕಾದರೆ ನೀವು ಭೇಟಿ ಆಗಬೇಕಾದ ಮಹಿಳೆ ಶ್ರೀಮತಿ. ಉಮಾ ಸರ್ವೇಶ್ ಅವರು.

ಇವರು ಮಲ್ಲಿಗೆ ಕನ್ನಡ ಸಂಘಕ್ಕೆ ಅಪರಿಚಿತರಲ್ಲ. ಮಲ್ಲಿಗೆ ಕನ್ನಡ ಸಂಘದ ಸದಸ್ಯರಾದ ಶ್ರೀಮತಿ ಸಹನಾ ಸುನಿಲ್ ಅವರ ಮಾತೃಶ್ರೀಗಳು ಇವರಾಗಿರುತ್ತಾರೆ. ಹಿಂದೆ ಅವರು ಡಲ್ಲಾಸ್ ನಗರಕ್ಕೆ ಭೇಟಿ ಇತ್ತಾಗ ಮಲ್ಲಿಗೆ ಕನ್ನಡ ಸಂಘದ



ಕಾರ್ಯಕ್ರಮಕ್ಕೆ ಕಿರು ನಾಟಕಗಳನ್ನು ಬರೆದು ಸದಸ್ಯರಿಂದ ನಾಟಕಗಳನ್ನು ಮಾಡಿಸಿರುತ್ತಾರೆ. ಅದರಲ್ಲಿ ನಿಮಗೆಲ್ಲ ನೆನಪಿರುವ ಬೀಗರ ಕಲಹ ಭಾಗ ಒಂದು, ಹಾಗು ಬೀಗರ ಕಲಹ ಭಾಗ ಎರಡು ಅಲ್ಲದೆ ಅತ್ತೆ ಸೊಸೆಯರ ಸಾಮರಸ್ಯದ ಬಗ್ಗೆ ಒಂದು ಸಣ್ಣ ನಗೆ ನಾಟಕವು ಒಂದು. ಸಾಹಿತ್ಯ, ನಾಟಕ ರಚನೆಗಳಲ್ಲದೆ, ಅವರಿಗೆ ಅಭಿರುಚಿ ಹಾಗು ಹವ್ಯಾಸಗಳು ಹಲವಾರು. ಅದರಲ್ಲಿ ಪ್ರಮುಖವಾಗಿ ಹೆಸರಿಸಬೇಕಾದದ್ದು ತರಕಾರಿಗಳನ್ನು ಸಣ್ಣ ಚಾಕು ಅಥವಾ ಸಣ್ಣ ಚಮಚಗಳಿಂದ ಕೊರೆದು ವಿಧ ವಿಧವಾದ ವಿನ್ಯಾಸಗಳನ್ನು ಮಾಡುವುದು. ಉದಾಹರಣೆಗೆ ಇವರ ಕೈಗೆ ಕೆಂಪು ದೊಣ್ಣೆಮೆಣಸಿನಕಾಯಿ ಸಿಕ್ಕರೆ ಅದು ಟುಲಿಪ್ ರೂಪ ತಾಳಿದರೆ, ಟೊಮೇಟೊ ಲಿಲ್ಲಿಯಾಗಿ, ಕ್ಯಾರೆಟ್ ಶಾವಂತಿಗೆಯಾಗಿ ಅರಳುತ್ತದೆ. ಇದನ್ನೆಲ್ಲಾ ಇಡಲು ಸುಂದರ ವೇಸ್ ಅವರ ಕೈ ಚಳಕದಿಂದ ಹೊರಬಂದಂಥ ಆಲೂಗಡ್ಡೆಯಾಗಿರುತ್ತದೆ.

ಚುಕ್ಕಿಗಳೇ ಇಲ್ಲದೆ ಬಣ್ಣ ಬಣ್ಣದ ಚಿತ್ತಾರಗಳನ್ನು ತಮ್ಮ ರಂಗೋಲಿ ಮೂಲಕ ಬಿಡಿಸುತ್ತಾರೆ, ರೇಖಾ ಚಿತ್ರಗಳನ್ನು ಸ್ಥಳದಲ್ಲೇ ಮೂಡಿಸುವ ಉಮಾ ಸರ್ವೇಶ್ ಅವರಿಗೆ ಕೇಶಾಲಂಕಾರ ಮಾಡುವುದೆಂದರೆ ಬಹು ಆಸಕ್ತಿ. ಗಿಡ್ಡ ಕೂದಲಾಗಲಿ, ಉದ್ದ ಕೂದಲಾಗಲಿ, ಯಾವುದೇ ಹೇರ್ ಕ್ಲಿಪ್ಗಳ ಉಪಯೋಗ ಮಾಡದೆ ವಿವಿಧ ರೀತಿಯ ಕೇಶಾಲಂಕಾರ ಹೇಗೆ ಮಾಡುವುದು, ಗಡಿಬಿಡಿ ಜೀವನಶೈಲಿಯಲ್ಲಿ ಹೆಚ್ಚಿಗೆ ಸಮಯವನ್ನು ವ್ಯರ್ಥ ಮಾಡದೆ ವಿಧ ವಿಧವಾದ, ಅಂದಕ್ಕೆ ಒಪ್ಪುವ ಹಾಗೆ ಹೇರ್ ಸ್ಟೈಲ್ ಮಾಡುವ ಬಗೆ ಇತ್ಯಾದಿಗಳನ್ನು ಜನರಿಗೆ ತೋರಿಸಿಕೊಡುತ್ತಾರೆ. ಈ ರೀತಿಯ ತರಕಾರಿ ವಿನ್ಯಾಸ, ಕೇಶಾಲಂಕಾರ ವಿನ್ಯಾಸಗಳನ್ನು ಜನರಿಗೆ ಅದರಲ್ಲೂ ಮಕ್ಕಳಿಗೆ ತೋರಿಸುವುದೆಂದರೆ ಇವರಿಗೆ ಎಲ್ಲಿಲ್ಲದ ಉತ್ಸಾಹ. ಬೆಂಗಳೂರಿನಲ್ಲಿ ನೆಲಸಿರುವ ಇವರು ಉತ್ಸಾಹದ ಚಿಲುಮೆ, ಸದಾ ಚಟುವಟಿಕೆಗಳಿಂದ ಕೂಡಿರುತ್ತಾರೆ. ಸ್ಥಳೀಯ ಮಹಿಳಾ ಸಂಘಗಳು, ರೋಟರಿ, ಜೇಸೀಸ್ನಲ್ಲು ತಮ್ಮನ್ನು ತಾವು ತೊಡಗಿಸಿಕೊಂದಿರುತ್ತಾರೆ. ಇವರು ಕಾಣಿಸಿಕೊಳ್ಳದ ಟಿವಿ ಷೋಗಳಿಲ್ಲ . ಒಂದು ಚಾನೆಲ್ನಲ್ಲಿ ಇವರ ಹೊಸ ರುಚಿ ಕಾರ್ಯಕ್ರಮವಾದರೆ ಇನ್ನೊಂದರಲ್ಲಿ ಕೇಶಾಲಂಕಾರ ಇತ್ಯಾದಿ.




ರಾವಣನಿಗೆ ಫೇಸ್ ಬುಕ್ನಲ್ಲಿ ಎಷ್ಟು ಖಾತೆ?

ಹತ್ತು

## ಕರ ಕುಶಲೆ - ಉಮಾ ಸರ್ವೇಶ್

- ಮೀನಾ ಭಾರದ್ವಾಜ್





ಕಳೆದ ಭೇಟಿಯಲ್ಲಿ ಡಲ್ಲಾಸ್ ಮೆಟ್ರೋದ ವಿವಿಧ ಭಾಗದಲ್ಲಿ ಮಕ್ಕಳಿಗೆ ಹಾಗು ಆಸಕ್ತ ಜನರಿಗೆ ವರ್ಕ್ ಶಾಪ್ ಗಳನ್ನೂ ನಡೆಸಿರುತ್ತಾರೆ. ಬೇಸಿಗೆ ರಜೆಯಾಗಿದ್ದರಿಂದ ಮಕ್ಕಳಿಗೆ ಉಮಾ ಆಂಟಿಯವರೊಂದಿಗೆ ತರಕಾರಿಗಳಿಗೆ ಬೇರೆ ರೂಪ ಕೊಡುವುದು ಒಂದು ಮಜದ ಸಂಗತಿಯಾಗಿತ್ತು. ಈ ಬಾರಿಯೂ ತಮ್ಮ ಪ್ರವಾಸದ ವೇಳೆ ಮಕ್ಕಳಿಗೆ, ಆಸಕ್ತರಿಗೆ ತಮ್ಮ ಕಲಾ ಜ್ಞಾನವನ್ನು ಹಂಚಿಕೊಳ್ಳಬೇಕೆಂಬ ಬಯಕೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಶ್ರೀಮತಿ. ಸಹನಾ ಸುನಿಲ್ (sunil_sahana@yahoo.com) ಅವರನ್ನು ಸಂಪರ್ಕಿಸಿ.

## ಸಂಪಾದಕೀಯ

- ಪೂರ್ಣಿಮ ಸುಬ್ರಹ್ಮಣ್ಯ



ಕಂಪು ಓದುಗ ಬಳಗಕ್ಕೆ ಶ್ರೀ ನಂದನ ನಾಮ ಸಂವತ್ಸರ ಯುಗಾದಿ ಹಾಗೂ ಶ್ರೀ ರಾಮನವಮಿಯ ಶುಭಾಶಯಗಳು.

ಮಾಗಿಯ ಚಳಿಗೆ ಮೈಯ್ಯೊಡೆದು ಬಿರುಸಾದ ಮರ ಗಿಡಗಳೆಲ್ಲಾ ವಸಂತ ದಿಬ್ಬಣಕೆ ಸಜ್ಜುಗೊಂಡಿವೆ ಚಿಗುರ ಮದರಂಗಿಯೊಡನೆ . ಹೊಸ ಹಸಿರು ವಸ್ತ್ರವನುಟ್ಟ ಅವನಿಗೆ ಎಳೆಬಿಸಿಲ ಜರಿಯಂಚು. ನಂದನವನವನೇ ಹೋಲುವ ಮಹಿಯ ಒಡಲಲಿ ಕವಿ ಬೇಂದ್ರೆ ನುಡಿದಂತೆ "ನೂರು ಮರ ! ನೂರು ಸ್ವರ ! ಒಂದೊಂದು ಅತಿ ಮಧುರ !!",
ಮನೆ ಮನೆಗಳಲ್ಲಿ ಯುಗಾದಿಯ ಸಂಭ್ರಮ, ಬೇವು -ಬೆಲ್ಲ .
ಇದೆಲ್ಲಾ ಸಡಗರದ ಜೊತೆ ಜೊತೆಯಾಗಿ ಬಂದಿದೆ ಈ "ಕಂಪು " ಸಂಚಿಕೆ . ನಿಮ್ಮೆಲ್ಲರ ಸಹಕಾರ, ಪ್ರೋತ್ಸಾಹ, ಅಭಿಮಾನ ಸಂತಸದ ಸಂಗತಿ. ನಿಮ್ಮ ಬರಹ, ಪ್ರತಿಕ್ರಿಯೆ, ಸಲಹೆ, ಸೂಚನೆಗಳಿಗೆ ಸದಾ ಸ್ವಾಗತ.



ನೂತನ ಸಂವತ್ಸರದಲ್ಲಿ ಎಲ್ಲರಿಗು ಸಿಹಿ ಸಮೃದ್ಧವಾಗಲಿ, ಬೇಡವಾದರು ಬರುವ ಕಹಿ ಔಷಧಿಯಂತೆ ಸೀಮಿತವಾಗಿರಲಿ, ಮನೋಸ್ಥೈರ್ಯವನ್ನು ಬಲಗೊಳಿಸಲಿ .

ಬದುಕು ಚೈತ್ರವಾಗಲಿ ಎಂದು ಆಶಿಸುತ್ತ
ಪೂರ್ಣಿಮಾ ಸುಬ್ರಹ್ಮಣ್ಯ

ರಾವಣ ಅಮೆರಿಕೆಯಲ್ಲಿ ಇದ್ದರೆ ಯಾವ ಬಿಲ್ ಹೆಚ್ಚು ಕಟ್ಟುತ್ತಾನೆ ?
ಡೆಂಟಲ್ Insurance.

ಮುಖಪುಟ

# Kanglish!

– ಸುಧಾ ಶ್ರೀನಾಥ್



In my college, where the medium of instruction was English, nobody ever cared much for pronunciation. I grew up with no dilemma about whether to pronounce it as 'di-lemma' or 'dye-lemma'; but very recently I had to learn the difference between 'e' and 'y' sounds, 'w' and 'v' sounds, long and short vowel sounds and so on. I can never forget that day when my 6 year old daughter taught me rules about pronunciation that no one ever tried to explain in all my schools.

We were living in Texas, USA and planning a trip home. "This ear also we are going to India in the summer, but this time we are going from the vest", I told my daughter. In fact, I thought I said, "This year also we are going to India in the summer, but this time we are going from the west". We went home every summer by the Atlantic route to Bombay and then to our hometown via Bengaluru. For the first time we were planning to fly over Pacific and see how it would feel to cross the international dateline. She was also excited, except that I saw a smile on her face. When I asked her for an explanation, she had to answer. "Amma…you always mix up between 'y' and 'e' sounds. 'y' has the consonant sound of 'ya', 'yaa', 'yi' , 'yee', etc., in Kannada while 'e' has the vowel sound of 'i', 'ee'. That was, indeed, enlightenment for me; am I glad that her Kannada 'araLu mallige' class at DFW Hindu Temple is helping me learn English pronunciation! What she pointed out was an inescapable reality, one which I could not ignore but take a stand on working towards improving immediately and enthusiastically. I found a teacher in my six year old!

This was just the beginning. I realised that it is a challenge to unlearn my wrong pronunciations and practise the newly learnt correct ones! I kept observing how my Indian friends handle these subtleties in pronunciation. This is absolutely with no intention of offending or hurting anyone's feelings but to help myself with further corrections. It was Sunday evening when a friend dropped in with her little son to play with my daughter. "Would you like some fruit?" I offered watermelon to them. "No, thank you! My mother-in-law has come to leave (live) with us. We were seating (sitting) and watching two future (feature) filams (films/movies) back to back this afternoon. While watching we yate (ate) a lot of popcorn. I'm fool (full) and he is fool (full) too. In fact, my ice (eyes) are burning from continuous watching."
Oops! These are totally different cases from the ones that I was looking for. "Today is the yelection (election) day at Indian Professionals' Association. On my vay (way) I vent (went) there to ote (vote); that's why I got delayed." She didn't disappointment me, after all!

"Can I borrow your daughter's ellow (yellow) Bharatanatyam dress for my daughter? It is for a cultural program for 'International Night' in her school next veek (week)." It was another friend on the phone! When I told her about our India trip and asked her to collect it before that, she very politely enquired "Has she finished her eggjams (exams) and yewrything (everything)?"

Our neighbours were from Cuba. The most hilarious one was when our neighbour's mom wanted to know whether we are going to India by sheep (ship). While it was natural for a Cuban to ask a question like that, I couldn't control my laughter imagining myself riding on a sheep. Well, by the end of the day, I figured out that many of us whose native language is not English provide free entertainment with our pronunciations and late (let) people (including our own children) yenjoy (enjoy)!



ಮುಂದಿನ ಸಂಚಿಕೆಯನ್ನು ಜುಲೈ 4ರ ವೇಳೆಗೆ ಸಿದ್ಧಪಡಿಸಲಾಗುವುದು.ನಿಮ್ಮ ಸಲಹೆ, ಸೂಚನೆ, ವಿಮರ್ಶೆಗಳಿಗೆ ಸದಾ ಸ್ವಾಗತ. ನಿಮ್ಮ ಆಸಕ್ತಿಯ ವಿಷಯ, ವರದಿ, ಪ್ರವಾಸ ಕಥನ, ಅನುಭವ, ಅಭಿಪ್ರಾಯ, ಚಿತ್ರಕಲೆ, ವ್ಯಂಗ್ಯಚಿತ್ರ, ಹೊಸರುಚಿ, ಹಾಡು-ಹಸೆ, ಪತ್ರ, ಪದಬಂಧ, ರಸಪ್ರಶ್ನೆ, ಪ್ರಕಟಣೆ, ವಿಜ್ಞಾನ, ವೈದ್ಯಕೀಯ, ಸಾಮಾಜಿಕ, ರಾಜಕೀಯ, ಪ್ರಚಲಿತ, ಸಾಹಿತ್ಯ, ಸಂಗೀತ, ಚಲನಚಿತ್ರ, ಹಾಸ್ಯ, ವಿಮರ್ಶೆ, ಆರೋಗ್ಯ, ಪುಸ್ತಕ ಪರಿಚಯ, ವಾಣಿಜ್ಯ, ವ್ಯವಹಾರ ಮುಂತಾದ ಯಾವುದೇ ವಿಭಾಗಕ್ಕೆ ಕೊಡುಗೆಗಳನ್ನು mkantcommittee@gmail.com ವಿಳಾಸಕ್ಕೆ ಕಳುಹಿಸಿ.

ರಾಮನು ಸಿಂಹಾಸನ ಏರಿದ ಮೇಲೆ ಏನು ಮಾಡಿದನು ?

ಕುಳಿತುಕೊಂಡನು.